

# ಕುಶಲೆ ಹಿತ್ತಲು

■ ಫಾಲ್ಗುಣ ಗೌಡ ಅಚವೆ
ಕಲೆ: ಈಶ್ವರ ಬಡಿಗೇರ್

ಎಂದಿನಂತೆ ನಸುಕಿನಲ್ಲಿ ಎಬ್ಬಿಸುತ್ತಿದ್ದ ಕುಶಲಕ್ಕ ಅವತ್ತು ಮಲಗಿದ್ದವಳು ಬೇಗ ಏಳಲೇ ಇಲ್ಲ. ಅವಳ ತಲೆಯಲ್ಲಿ ಹಿತ್ತಲ ದೇಕರಿಕೆ ನೋಡಿಕೊಳ್ಳುವವರಾರೆಂಬ ಅನಾಥ ಭಾವ ಕಾಡಿದ್ದಷ್ಟೇ ಅಲ್ಲ, ಅವಳಲ್ಲೂ ಒಂದು ತರದ ಅನಾಥಭಾವ ಕಾಡಿತ್ತು. ಮೊದಲೆಲ್ಲ ಕುಶಲಕ್ಕ ನಸುಕಿಗೆ ಎಬ್ಬಿಸುತ್ತಿದ್ದಳು. ನಂತರ ಅವತ್ತಿನ ಅಡುಗೆ ಮಾಡುವುದು ಬಟ್ಟೆ ಒಗೆಯುವುದು ನಿತ್ಯದ ಕೆಲಸ. ರುಚಿ ರುಚಿಯಾಗಿ ಅಡುಗೆ ಮಾಡಿ ಬಡಿಸುತ್ತಾ ಗಂಡನಿಗೆ, ಮಕ್ಕಳಿಗೆ ಲವಲವಿಕೆಯಿಂದ ಇರುವ ಕುಶಲಕ್ಕ ಅವತ್ತು ಸಮಾಧಾನದಿಂದ ಇದ್ದಂತೆ ಕಾಣಲಿಲ್ಲ. ಅದಕ್ಕೂ ಮೊದಲು ಇಬ್ಬರೂ ಇದ್ದದ್ದು ಮಾವನ ಮನೆಯಲ್ಲಿ. ದ್ಯಾವರಗದ್ದೆಯ ಕುಡ್ಡನ ದಚ್ಚು ಕೂಡ ಅಲ್ಲಿ ಕಬ್ಬು ಬೆಳೆಯುತ್ತಿದ್ದ. ಒಂದಿನ ದಚ್ಚು, 'ಸಣಕೂಸ ನೀನು ದೇವರ ಗದ್ದೆಗೆ ಬಾರ. ನನ್ನ ಭೂಮಿ ಲಗ್ತ ಒಂದು ತುಂಡ ಜಾಗ ಈತ್ ನೋಡು. ಅದು ನಿಂಗೇ' ಅಂದಾಗಿನಿಂದ ಇಲ್ಲಿಗೆ ಬಂದು ಸಣ್ಣ ಮನೆ ಮಾಡಿಕೊಂಡಿದ್ದ. ವರ್ಷಗಳ ನಂತರ ಲಗ್ತ ಇದ್ದ ಎರಡೆಕರೆ ಜಮೀನನ್ನು ಮಾಲ್ಕಿ ಸುಕ್ರುಗೆ ಕೊಟ್ಟ ಮೇಲೆ ಆ ತುಂಡು ಜಮೀನಿನ ಕತೆ ಬೇರೆಯೇ ಆಗಿ ಸಣಕೂಸಗೆ ತನ್ನ ಮನೆ ಲಗ್ತ ಇದ್ದರೂ ತುಂಬಾ ದೂರ ಇದ್ದಂತೆ ಕಾಣಿಸುತ್ತಿತ್ತು.

'ಆ ತುಂಡು ನಿನಗೇ ಕೊಡ್ತೇನೆ ಏನಾರು ಕೊಡ್ನಾಕು' ಎಂದ ಸುಕ್ರುನ ಮಾತಿಗೆ ಕಟ್ಟುಬಿದ್ದು ಸಣಕೂಸ ಮಾಲ್ಕಿ ಸುಕ್ರು ಜಮೀನನ್ನು ಗೇಣಿಗೆ ಮಾಡುತ್ತಲೇ ಬಂದಿದ್ದ. ದೇವರಗದ್ದೆಯ ಆಚೆ ತುಂಡು ಕಡನೀರಿನಲ್ಲಿರುವ 'ಅಮ್ನೋರಿ'ಗೆ ಪೂಜೆಗೆ ಹೋದಾಗೆಲ್ಲ ಅಮ್ಮನಲ್ಲಿ ಕೇಳಿಕೊಳ್ಳುವುದು. ಬೆಳಿಗ್ಗೆ ಸಂಜೆ ಊದುಬತ್ತಿ ಹಚ್ಚುವಾಗ ಆ ತುಂಡು ಭೂಮಿ ನೆನೆಯುವುದು. ಇಷ್ಟೇ ಸಣಕೂಸನ ನಿತ್ಯ ಪ್ರಾರ್ಥನೆಯಾಗಿತ್ತು. ಲಗ್ತ ಇರುವ 'ತುಂಡು ಭೂಮಿ' ಸಿಕ್ಕರೆ ನನ್ನದೇ ಆದ ಸಾಗುವಳಿ ಮಾಡಬಹುದಿತ್ತು ಅಂತ ಸಣಕೂಸ ಯಾವ ಯಾವಗೆಲ್ಲ ಹೇಳುತ್ತಿದ್ದುದಿದೆ. ಅಪರೂಪಕ್ಕೆ ಸಿಕ್ಕುವ ಮಾಲ್ಕಿ ಸುಕ್ರು ಹತ್ತಿರ ಕೇಳೇ ಕೇಳುವುದು ಎಂದಾಗಲೆಲ್ಲ 'ನಾನ್ ನಾಡ್ತಿಗೆ ಬತ್ತೀನಾ' ಅಂತಾ ಅವ ಸುಳ್ಳು ಹೇಳುವುದು ಸಣಕೂಸನನ್ನು ನಿರಾಸೆಗೊಳಿಸುತ್ತಿತ್ತು. ಕುಶಲಕ್ಕ ಇದನ್ನೆಲ್ಲ ಮನಸ್ಸಿಗೆ ಹಚ್ಚಿಕೊಂಡು ಹಿತ್ತಲ ಕೆಲಸದಲ್ಲಿ ನಿರತಳಾಗುತ್ತಿದ್ದಳು. ಕುಶಲೆಗೆ ಸುತ್ತಮುತ್ತಲಿನ ಹೆಂಗಸರೆಲ್ಲ 'ಕುಶಲಕ್ಕ' ಎಂದೇ ಕರೆಯುವುದು. ಅವಳ ಅಪ್ಪ ಕುಸಲಪ್ಪ ಗೌಡ ಕುಶಲೆ ದೇವರ ಭಕ್ತನಾಗಿದ್ದರಿಂದ ಅವಳಿಗೆ ಕುಶಲೆ ಅಂತ ಹೆಸರಿಟ್ಟಿರಬೇಕು. ಅವರಿಬ್ಬರೂ ಊರಿನ ಜನರಿಗೆಲ್ಲ. 'ಅಕ್ಕಭಾವ' ಆಗಿದ್ದರು.

ಕುಶಲಕ್ಕನ ಮನೆಯಿರುವುದು ಹಳ್ಳದಂಚಿಗೆ. ಮನೆಯ ಆಚೆಗೆ ಸಣ್ಣತುಂಡು ಜಮೀನಿಗೆ ಮನಸ್ಸು ಇಟ್ಟಿದ್ದರೆ ಮನೆಯ ಇಚ್ಚಿಗೆ ಇನ್ನೊಂದು ತುಂಡು ಜಮೀನಿದೆ. ಅದೇ ಕುಶಲೆ ಹಿತ್ತಲು. ಕುಶಲೆ ಹಿತ್ತಲಿನಲ್ಲಿ ಅವಳು ಬೆಳೆಯದ ತರಕಾರಿಗಳಿಲ್ಲ, ಹೇಳದ ಕತೆಗಳಿಲ್ಲ, ಹಾಡದ ಹಾಡುಗಳಿಲ್ಲ. ಆಡದ ಸುದ್ದಿಗಳಿಲ್ಲ. ಆಲೂಗೆ ಮತ್ತು ಮಗ ಇಶ್ರನಿಗೆ ರಜೆ ಬಿದ್ದರೆ ಎಲ್ಲ ದಿನಗಳು ಕಳೆಯುವುದು ಅಲ್ಲಿಯೇ. ಅವಳು ಹೇಳುವ ಕತೆಯೆಂದರೆ ಆಲೂಗೆ ಎಲ್ಲಿಲ್ಲದ ಪ್ರೀತಿ. ಹಿತ್ತಲ ಅಂಗಳದಲ್ಲಿ ಬರಿ ಕತೆಯಷ್ಟೇ ಇರಲಿಲ್ಲ. ಅಡಕೆ ಕದ್ದ ಸುದ್ದಿ, ಬಯಲಾಟ ನಿಕ್ಕಿಯಾದ ಸುದ್ದಿ, ಸಂಕ್ರಾಂತಿ ಆಟದ ಸುದ್ದಿ, ಓಡಿಹೋದ ಸುದ್ದಿ ಆಲು ಕೇಳುವುದು ಅಲ್ಲಿಯೇ. ಕುಶಲೆ ತನ್ನ ಅಪ್ಪನ ಮನೆಯಿಂದ ಬಕ್ಕೆ ಹಲಸಿನಹಣ್ಣು ತಂದು ತುಂಡು ಮಾಡಿ ಎಲ್ಲರಿಗೂ ಹಂಚುವುದು ಹಿತ್ತಲಿನ ಇದೇ ಅಂಗಳದಲ್ಲಿಯೇ. ಗದ್ದೆ ಕೊಯ್ಲು ಬಂತೆಂದರೆ ಹೊಸ ಮಣ್ಣು ತಂದು ನಯವಾದ ಕಲ್ಲಿನಿಂದ ಒರೆದು ಒಣಗಿಸಿದ ಅಂಗಳವಿದು. ಮಳೆಗಾಲಕ್ಕೆ ಬೇಕಾದ ತರಕಾರಿ ಬೀಜಗಳು ಒಣಗುವುದು ಅವಳ ಅಣ್ಣನ ಮದುವೆ ನಿಕ್ಕಿಯಾದ ಮೊದಲಿನ ಪಂಚೇತ್ಗಿಗಳು ಇದೇ ಅಂಗಳದಲ್ಲಿ ಆದದ್ದು ನೆನಪಿಸಿಕೊಳ್ಳುತ್ತಾಳೆ. ಸಣಕೂಸನ ಎಲ್ಲ ಕಾಲದ ಕನಸು ಆಗಿರುವ ಮನೆಯಾಚೆಯ 'ತುಂಡು ಭೂಮಿ' ಸಿಕ್ಕರೆ ಭೂಪ ಕೇಳೆಂದ, ಅನ್ನುವ ಮುಖಭಾವದಲ್ಲಿ ಅಂಗಳದಲ್ಲಿ ಕೂತು ಒಮ್ಮೊಮ್ಮೆ ಸಿಗುವುದೋ ಇಲ್ಲವೋ ಅಂತ ತಲೆಬಿಸಿ ಮಾಡಿಕೊಳ್ಳುತ್ತಿದ್ದ. ಅವನ ತಲೆ ಬಿಸಿಯಲ್ಲಿ ಕುಶಲಕ್ಕನೂ ಭಾಗಿ.

ಆಲು ಇಶ್ರಾ ಹೈಸ್ಕೂಲ್ ಹಂತಕ್ಕೆ ಬರುತ್ತಿದ್ದಂತೆ ಪೇಟೆಯ ಶಾಲೆಗೆ ಹೊರಡುತ್ತಾರೆ. ಆಗಲೂ ಆಲು ಊರಿಗೆ ಬಂದಾಗಲೆಲ್ಲ ಕುಶಲಕ್ಕನ ಮನೆಯಲ್ಲೇ ಇದ್ದು ಸಣಕೂಸನಿಗೆ ಗದ್ದೆಯಲ್ಲಿ ಕುಶಲಕ್ಕನ ಹಿತ್ತಲು ಹುರೈಸುವ ಕೆಲಸದಲ್ಲಿ ಕುಶಲಕ್ಕನ ಜೊತೆ ಕಾಡಿಗೆ ಹೋಗಿ ಸೌದೆ ತರುವುದು ಸಣಕೂಸನ ಜೊತೆ ಬೇಲಿ ಕಟ್ಟುವುದು ಎಲ್ಲವೂ ತನ್ನ ಮನೆಗಿಂತಲೂ ಹೆಚ್ಚಾಗಿ ರಜೆಗೆ ಬಂದಾಗ ಕುಶಲಕ್ಕನ ಮನೆಯಲ್ಲೇ ಇರುವುದು. ಈ ಮಧ್ಯೆ ಮನೆಯ ಆಚೆಗಿನ ತುಂಡು ಭೂಮಿಯ ಪಕ್ಕದಲ್ಲಿ ಯಾರೋ ಸಣ್ಣ ನೆಲಗಟ್ಟು, ಹಾಕಿದ್ದು ಕಂಡ ಸಣಕೂಸ ತಲೆ ತುರಿಸುತ್ತಲೇ ಮನೆಗೆ ಬಂದ. ಕುಡ್ಡನ ದಚ್ಚು ಮತ್ಯಾರನ್ನೋ ತಂದು ಕುಳ್ಳಿಸುವ ಲೆಕ್ಕ ಹಾಕಿದ್ದಾನೆ ಎಂಬುದು ಸಣಕೂಸನ ಬೇಜಾರಿಗೆ ಕಾರಣವಾಗಿತ್ತು. ಕುಡಿಯಲು ದುಡ್ಡು ಕೊಟ್ಟರೆ ಅವರ ಪರ ಮಾತಾಡುವ ಈತ ಅವರಿಂದ ದುಡ್ಡು ಎಳೆದಿರಬೇಕು ಅಂತ ಅನಿಸಿ ಸಣಕೂಸ ಒಂದಿನ ಎಲ್ಲಿಗೂ ಹೋಗದೇ ಬೇಜಾರದಲ್ಲೇ ಇದ್ದ. ಅದಾದ ನಾಲ್ಕೈದು ದಿನದ ನಂತರ ಅರಣ್ಯ ಇಲಾಖೆಯ ಕಡೆಯವನೊಬ್ಬ ಕುಶಲೆ ಹಿತ್ತಲ ಆಚೆ 'ಬಾಂದು' ಹುಗಿದುಹೋಗಿದ್ದ ತುಂಡು ಭೂಮಿಯ 'ನೆಲಗಟ್ಟಿ'ನಕ್ಕಿಂತಲೂ